ರಜನಿ ಪ್ರಕಾಶ್, ಬೆಂಗಳೂರು
ಗಂಡಸರಿಗೆ 50ರ ನಂತರ ಬೇರೆಯವರ ಹೆಂಡತಿಯರೇ ಸುಂದರವಾಗಿ ಕಾಣುವರಲ್ಲ, ಕಾರಣ?



ತಪ್ಪು ತಿಳಿದಿದ್ದೀರಿ. ಅದಕ್ಕೆ ವಯಸ್ಸಿನ ಕನಿಷ್ಠ, ಗರಿಷ್ಠ ಮಿತಿಗಳಿಲ್ಲ.

ಮಲ್ಲಿಕಾರ್ಜುನ, ಸುರಧೇನುಪುರ
ಬಂಧಿಖಾನೆಯಿಂದ ಪಾರಾಗುವ ಸಿನಿ ಉಪಾಯ ನಟ ದರ್ಶನ್‌ಗೆ ಏಕೆ ಹೊಳೆಯುತ್ತಿಲ್ಲ?
ಹೊಳೆದಿದೆ. ಬದುಕು ಚಿತ್ರಕಥೆಯಲ್ಲ ಎಂಬ ವಿವೇಕ ಇರುವುದರಿಂದ ಯತ್ನಿಸಿಲ್ಲ.

ಪಿ. ಜಯವಂತ ಪೈ, ಕುಂದಾಪುರ
ಮಿನಿ ಬಟ್ಟೆಯ ದೇಹ ಪ್ರದರ್ಶನ ದಿನದಿಂದ ದಿನಕ್ಕೆ ಹೆಚ್ಚುತ್ತಿದೆಯಲ್ಲ?
'ದೇಹದ ವಿಟಮಿನ್ ಡಿ ಕೊರತೆ ನೀಗಲು ಇದು ಅವಶ್ಯ' ಎಂದಳಾ ಬೆಡಗಿ.

ದಿನೇಶ್, ಗುಡ್ಡದೂರು
ಹಾವಿನ ದ್ವೇಷ ಹನ್ನೆರಡು ವರುಷ. ರಾಜಕಾರಣಿಗಳ ದ್ವೇಷ?



ಉದ್ದೇಶ ಈಡೇರುವ ತನಕ.

ಎಂ.ಎ. ಕುಮಾರ್, ಬೆಂಗಳೂರು
ಇನ್ನೊಂದು ಹೆಣ್ಣಿನ ಸಂಗಕ್ಕೆ ಸ್ಟೆಪ್ನಿ ಎನ್ನುವುದೇಕೆ?
ಅವಳ ಸಂಗ ಜಗಕ್ಕೆ ತಿಳಿದಾಗಲೆಲ್ಲ ಇವನನ್ನು ಜ್ಯಾಕ್ ಹಾಕಿ ಎತ್ತುವುದರಿಂದ.

ಜಿ.ಆರ್. ಆದಿನಾರಾಯಣಮುನಿ, ಕೊಳ್ಳೇಗಾಲ
ಅದೃಷ್ಟ ತಲೆ ಬಾಗುವುದು ಯಾವಾಗ?
ಎಷ್ಟೇ ಬಾಗಿಲು ತಟ್ಟಿದರೂ ಈ ಸೋಮಾರಿ ಬಾಗಿಲು ತೆರೆಯದಿದ್ದಾಗ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
ದಯೆ, ದೇವರಿಲ್ಲದ ಜಾಗ ಯಾವುದು?
ವರ್ತಕ ವೈದ್ಯರ ಆಸ್ಪತ್ರೆ, ಭ್ರಷ್ಟರ ಕಚೇರಿ, ನ್ಯಾಯವಧಾಧೀಶರ ಚೇಂಬರ್...

ಚೈತ್ರ ತೊಪ್ಪಲದ, ಬ್ಯಾಡಗಿ
ಜಪಾನೀಯರಿಗೆ ದೇವರೇ ಇಲ್ಲವಂತೆ. ಹೌದೇ?
ಇದೆಯಲ್ಲ. ಅವರಿಗೆ ದುಡಿಮೆಯೇ ದೇವರು.

ಜೀವಿ, ಗೊಂಡೇದಹಳ್ಳಿ
ವಿರಕ್ತರೇ ಹೆಚ್ಚು ಅನುರಕ್ತರಾಗುತ್ತಿದ್ದಾರಲ್ಲ?
ದೇಹಕ್ಕೆ ಧರಿಸಿದ ಕಾವಿ ಮನಸ್ಸಿನ ಕಾವಿಗೆ ಮಣಿದಿದೆಯಂತೆ.

ಬಿ. ಬಸವರಾಜ್, ಹರಿಹರ
ಸೈನ್ಸ್ ಹೇಳತ್ತೆ, 'ವಯಸ್ಸಾದಂತೆ ಹೆಚ್ಚು ಮಾತಾಡಿ.' ಮನ ಹೇಳತ್ತೆ, 'ಕಡಿಮೆ ಮಾತಿನಿಂದ ನೆಮ್ಮದಿ'. ಯಾವುದು ಸರಿ?
ಪ್ರಮಾಣ ತಗ್ಗಿಸಿ, ಗುಣ ಹೆಚ್ಚಿಸಿ. ವಯಸ್ಸಾದಂತೆ wise ಆಗಿ ಮಾತಾಡಿ!

ಎಸ್ವೆನ್ ಮಹಾಬಲರಾವ್, ಎನ್ನಾರ್ಪುರ
ಬಿತ್ತದೆ ಬೆಳೆ ತೆಗೆಯುವುದು ಹೇಗೆ?
ಬೆಳೆ ದಲ್ಲಾಳಿಯಾಗಿ.

ಮಹಾವೀರ ಕಾಸರ, ಶಿವಮೊಗ್ಗ
ಟೀವಿ ಮಾಧ್ಯಮದವರಿಗೆ ಕನ್ನಡ ಭಾಷಾ ಕಾರ್ಯಾಗಾರ ನಡೆಸಬೇಕೆ?
ಸಾಲದು. ಪ್ರತಿ ದಿನವೂ ಕ್ಲಾಸ್ ತೆಗೆದುಕೊಳ್ಳುವ ಪಂಡಿತರು ಬೇಕು.

ಕಾವ್ಯಶ್ರೀ, ಶೋರಾಪುರ
'ಆತ್ಮೋನ್ನತಿ'ಯ ಮಾರ್ಗ ಯಾವುದು ಗುರುವೆ?
'ಆತ್ಮವನ್ನು ಉನ್ನತ ಸ್ಥಾನಕ್ಕೆ ಮುಟ್ಟಿಸಬಲ್ಲ ಶ್ರಾದ್ಧ' ಎಂದನಾ ವೈದಿಕ.

ಆಶಾ ಅಪ್ರಮೇಯ, ದಾವಣಗೆರೆ
ಆನಂದದಿ ತೇಲಾಡುವ ವ್ಯಕ್ತಿಯನ್ನು ಆಹಾರದ ಹುಡುಕಾಟದಲ್ಲಿ ಹಾರಾಡುವ ಪಕ್ಷಿಗೆ ಹೋಲಿಸುವುದು ನ್ಯಾಯವೆ?
ಗಟ್ಟಿ ಹಲ್ಲುಗಳನ್ನು ದಾಳಿಂಬೆಗೆ, ಸಂಪಿಗೆಯನ್ನು ವಾಸನೆಯಿಲ್ಲದ ಮೂಗಿಗೆ ಹೋಲಿಸುವರಲ್ಲ. ಉಪಮೆ ತರ್ಕಾತೀತ.


## ಬಹುಮಾನಿತ ಪ್ರಶ್ನೆ

ವಾಸಣ್ಣ, ಧಾರವಾಡ
ಸುಖದ ಸುಪ್ಪತ್ತಿಗೆಯಲ್ಲಿದ್ದೂ ಇನ್ನೂ ಸುಖಕ್ಕಾಗಿ ದೇವರನ್ನು ಬೇಡುವರು. ಕಷ್ಟ ನೀಡೆಂದು ಯಾರೂ ಬೇಡರೇಕೆ?
ಕಷ್ಟಕ್ಕೆ ದೇವರನ್ನು ಬೇಡಬೇಕಿಲ್ಲ. ನೆರೆಹೊರೆ, ಸರ್ಕಾರ, ಸಂಸಾರಗಳೇ ಸಾಕೆಂದು ತಿಳಿದಿದೆ.

ಕುಮಾರ ಬಸವಂತ ಹೊನ್ನಾಯ್ಕ, ಸದಲಗಾ
ಮನುಷ್ಯನಿಗೆ ಸಿಟ್ಟು ಬಂದಾಗ ಬಾಯಿಗೆ ಕೆಲಸ ಕೊಡುವುದು ಒಳ್ಳೆಯದೋ?
ಹೂಂ. ಅಂಟಿರುವ ಪದಾರ್ಥವನ್ನು ಬಾಯಿಗೆ ಹಾಕಿಕೊಳ್ಳಿ. ನುಡಿ ಹೊರಡದೆ ಮನಸ್ತಾಪ ತಪ್ಪುತ್ತದೆ.

ಜಗದೀಶ ಬಿ. ಹೊಸೂರು, ಮೈಸೂರು
ರಿಯಾಲಿಟಿ ಶೋನಲ್ಲಿ ರಿಯಾಲಿಟಿ ಏನಿರಬಹುದು?
ಕ್ವಾಂಟಿಟಿ ಬೇಕಾದಷ್ಟು; ಕ್ವಾಲಿಟಿ ಎಂಪ್ಟಿ.

ಬಿ. ಚಂದ್ರೇಗೌಡ, ಬೆಂಗಳೂರು
ಹೆಣ್ಣನ್ನು 'ಲಲನೆ' ಎನ್ನುವುದೇಕೆ?



ಲಲಿತ ನಡೆ; ಲಸಿತ ಬೆಡಗು; ನೆನೆದಾಗ ಹಿತವಾದ್ದರಿಂದ.

ಹೆಚ್.ವಿ. ರಂಗನಾಥ, ಬೆಂಗಳೂರು
ನೀವು ನಮ್ಮ ಪ್ರಶ್ನೆಗಳಿಗೆ ಥಟ್ ಅಂತ ಉತ್ತರಿಸುತ್ತೀರೋ ಅಥವಾ ಆಯ್ಕೆಗಳು ಬೇಕೋ?
ಥಟ್ ಎಂದೇನಿಲ್ಲ. ಸದ್ದಿಲ್ಲದೆಯೇ ಕೂಡಲೆ ಉತ್ತರಿಸುವೆ.

ವಿಜಯಕುಮಾರಿ ದಯಾನಂದನ್, ಚೆನ್ನೈ
ನಮ್ಮ ಸಾಧನೆಯ ಬಗ್ಗೆ ಯಾರಾದರೂ ತೊಂದರೆ ಮಾಡಿದರೆ ಏನು ಮಾಡುವುದು?
ಅದಕ್ಕಿಂತಲೂ ಹೆಚ್ಚಿನದನ್ನು ಸಾಧಿಸಿ 'ಮಾಡಿ ನೋಡೋಣ' ಎಂದು ಸವಾಲೆಸೆಯುವುದು.

■ ರಾಮ್